

# ನಮ್ಮ ಮಕ್ಕಳು ಹೀಗೇಕೆ?



ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

» ನನ್ನ ಗಂಡು ಮಗುವಿಗೀಗ ಎರಡು ವರ್ಷ ಆರು ತಿಂಗಳು ತುಂಬಿದೆ. ಮುದ್ದು ಮುದ್ದಾಗಿದ್ದು ಚುಟಿಯಾಗಿದ್ದಾನೆ. ಆದರೆ ಮಾತಿನ ಬೆಳವಣಿಗೆ ಸ್ವಲ್ಪ ವಿಚಿತ್ರವಾಗಿರುವಂತೆ ಕಂಡುಬರುತ್ತದೆ. ಏಕೆಂದರೆ ನಾವು ಕೇಳಿದ ಪ್ರಶ್ನೆಗಳನ್ನ (ಉತ್ತರ ಕೊಡದೆ) ಹಾಗೆಯೇ ಹೇಳುತ್ತಾನೆ. ಕೆಲವೊಂದು ಮಾತುಗಳನ್ನು ಎರಡು ಮೂರು ಸಲ ಮತ್ತೆ ಮತ್ತೆ ಪುನರುಚ್ಚರಿಸುತ್ತಾನೆ. ಕೆಲವೊಮ್ಮೆ ಕೇಳಿದ ಪ್ರಶ್ನೆಗಳನ್ನೇ ತಲೆಚಿಟ್ಟು ಹಿಡಿಯುವಷ್ಟು ಸಲ ಕೇಳಿರುವುದುಂಟು. ಹೀಗೆ ಮಾತಾಡಬಾರದೆಂದು ಎಷ್ಟು ಸಲ ಹೇಳಿದರೂ ಅರ್ಥವಾಗಿಲ್ಲವೆನ್ನುವ ರೀತಿಯಲ್ಲಿ ವರ್ತಿಸುತ್ತಾನೆ. ನಮ್ಮದು ಕೂಡು ಕುಟುಂಬ. ಶಾಲೆಗೆ ಹೋಗುವ ಮಕ್ಕಳಿದ್ದಾರೆ (ಯಾರೂ ಹೀಗಿದ್ದಿರಲಿಲ್ಲ). ಅವರೆಲ್ಲರೂ ಇವನನ್ನು ಹಾಸ್ಯಮಾಡುವುದು, ಕೆಣಕುವುದು ಸಾಮಾನ್ಯ. ಈ ಕಾರಣದಿಂದಲೋ ಏನೋ ಕೆಲ ಸಲ ತುಟಿಪಿಟಕ್ಕೆನ್ನದೆ ಇಡೀ ದಿನ ಇದ್ದದ್ದುಂಟು. ಮುಂದಿನ ಬೆಳವಣಿಗೆ ಸರಿಯಾಗಿ ಇರದು ಎನ್ನುವಂತಹ ಆತಂಕದ ಭಾವನೆಯನ್ನು ಹುಟ್ಟಿಸಿದೆ. ಈ ಮಗುವಿನ ಭವಿಷ್ಯ ಉತ್ತಮವಾಗಿ ಸಾಗುವುದಕ್ಕೆ ಬೇಕಾದ ಎಲ್ಲ ಪ್ರಯತ್ನಗಳನ್ನು ಈಗಿನಿಂದಲೇ ಮಾಡುವುದು ಸರಿ ಎನ್ನುವ ಸಲಹೆ ಆಪ್ತರು, ಹಿತೈಷಿಗಳಿಂದ ಬಂದಿದೆ. ನನ್ನ ಮಗುವಿನ ಭಾಷಾ ಬೆಳವಣಿಗೆ ಸರಿಯಾಗಿ ಸಾಗುವುದಕ್ಕೆ ನಾವೇನು ಮಾಡಬೇಕು ದಯಮಾಡಿ ತಿಳಿಸಿ.

-ವಿಂದ್ಯಾ, ಹುಬ್ಬಳ್ಳಿ

ಸಾಮಾನ್ಯವಾಗಿ ಗಿಣಿಮಾತು! ಎನ್ನುವ ಈ ರೀತಿಯು ಮೊದಲ ಭಾಷೆ ಕಲಿಯುತ್ತಿರುವ ಮಕ್ಕಳಲ್ಲಿ ಅಪರೂಪವಲ್ಲ. ಕೇಳಿದ ಪ್ರಶ್ನೆಗೆ ಉತ್ತರ/ ಪ್ರತಿಕ್ರಿಯೆ ನೀಡುವುದರ ಬದಲಿಗೆ ವಾಕ್ಯವನ್ನು ಹಿಂದಿರುಗಿಸಿ ಕೇಳುವುದು ಕೆಲ ಮಕ್ಕಳ ಭಾಷಾ ಲಕ್ಷಣ. ಇದನ್ನು ಸಹಜ ಭಾಷಾ ವರ್ತನೆಯೆಂಬುದಾಗಿ ಪರಿಗಣಿಸುತ್ತಾರೆ. ನಿಮ್ಮ ಮಗುವಿನ ಮಿಕ್ಕೆಲ್ಲ ವರ್ತನೆಗಳು ವಯಸ್ಸಿಗೆ ಅನುಗುಣವಾಗಿದೆ ಎನ್ನುವುದು ಸ್ಪಷ್ಟವಾಗಿದ್ದರೆ ಆತಂಕಪಡುವ ಅಗತ್ಯವಿಲ್ಲ. ಹಿರಿಯರು ಮಗುವಿನೊಂದಿಗೆ ಆಡಿದ ಮಾತುಗಳನ್ನು ಮರು ಉಚ್ಚಾರ ಮಾಡುವುದು ಅವರ ಭಾಷಾ ವಿಕಾಸದ ಒಂದು ಪರಿ. ಮಕ್ಕಳು ಭಾಷೆ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಯಶಸ್ವಿಯಾದಾಗ ಮಾತಿನ ತೊಂದರೆಗಳು ಇಲ್ಲವೆಂದು ಊಹಿಸಬಹುದು. ವಯಸ್ಸಿನೊಂದಿಗೆ ಕಂಡುಬರುವ ಇತರ ವಿಕಾಸಗಳು ಸಮರ್ಪಕವಾಗಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಪುನರುಚ್ಚರಿಸುವಿಕೆ ಕಡಿಮೆಯಾಗುವುದು ಸ್ವಾಭಾವಿಕ. ಹಾಗೆಂದ ಮಾತ್ರಕ್ಕೆ ಈ ಮಾದರಿಯ ಮಾತುಗಳು ಭಾಷಾ ಬೆಳವಣಿಗೆಯ ತೊಂದರೆಯ ಮುನ್ಸೂಚನೆ ಆಗಿರಲಿಕ್ಕಿಲ್ಲವೆಂದು ಉದಾಸೀನ ಮಾಡುವುದು ಸರಿಯಲ್ಲ. ಕೆಲ ಮಕ್ಕಳಲ್ಲಿ ಹೇಳಿದ್ದನ್ನೇ ಹೇಳುವ ರೀತಿ ಮಾನಸಿಕ ಬೆಳವಣಿಗೆಯ ಹಾದಿ ಸಮರ್ಪಕವಾಗಿ ಮುಂದುವರಿಯುತ್ತಿಲ್ಲ ಅನ್ನುವುದರ ಸೂಚಿಯೂ ಆಗಿರಬಹುದು. ಹೊಸ ಪದಗಳು ಮಗುವಿನ ಭಾಷಾ ಸಂಪುಟದಲ್ಲಿ ಸೇರುತ್ತಿದ್ದರೆ ಮರು ಉಚ್ಚಾರಣೆಯ ಅಗತ್ಯ ಕಡಿಮೆಯಾಗುತ್ತದೆ. ಹೊಸ ಪದಗಳು ಅರ್ಥಪೂರ್ಣವಾದ ಭಾಷಾ ವರ್ತನೆಯನ್ನು ಹೊರತರುತ್ತದೆ. ಇದರಿಂದಾಗಿ ಸನ್ನಿವೇಶಕ್ಕೆ ಅಗತ್ಯವೆನ್ನುವಂತಹ ವಾಕ್ಯ ರಚನೆ, ಇತರರೊಂದಿಗೆ ಸಂಪರ್ಕ, ಕಲಿಯುವ ಸಾಮರ್ಥ್ಯಗಳು ಮಗುವಿನಲ್ಲಿದೆ ಎನ್ನುವುದಾಗಿ ತಿಳಿಯಬಹುದು. ಕ್ರಮೇಣ ಈ ಕ್ರಮ ಸರಾಗವಾಗಿ ಮುಂದುವರೆಯುತ್ತದೆ. ನಿಮ್ಮ ಮಗುವಿನ ಮಾತಿನ ಕ್ರಮವನ್ನು ಸರಿಯಾಗಿ ಗಮನಿಸುವ ಅಗತ್ಯವಿದೆ. ಮಕ್ಕಳು ಮರು ಉಚ್ಚಾರಣೆ ಮಾಡುವುದಕ್ಕೆ ಕಾರಣಗಳೆಂದರೆ: 1)ಈ ಕ್ರಮದಲ್ಲಿ ಮಾತಾಡುವುದು ಸುಲಭ. ಹೆಚ್ಚು ಶ್ರಮವಿರದೆ ಕೇಳಿಸಿಕೊಂಡಿದ್ದನ್ನೆ ಹೇಳುವುದನ್ನು ಇಷ್ಟ ಪಡುವ ಮಕ್ಕಳ ಲಕ್ಷಣ ಇದಾಗಿರುತ್ತದೆ; ಭಯ, ಬೇಸರ, ಉದಾಸೀನ, ಆತಂಕ ಮತ್ತು ಹಿಂಜರಿತದ ಸ್ವಭಾವದ ಮಕ್ಕಳು ಈ ಮಾದರಿಯ ಭಾಷಾ ಸಂಪರ್ಕವನ್ನು ಬಳಸುತ್ತಾರೆ; ಹಿತ, ಮಿತಗಳ ಸಂಪರ್ಕದ ಮಾದರಿಯೂ ಆಗಿರಬಲ್ಲದು; ಹೇಳಿದ್ದನ್ನೇ ಹೇಳುವ ಮಕ್ಕಳ ಮಾತು ಇತರರಲ್ಲಿ ಮಂದಹಾಸ, ಲವಲವಿಕೆ ತರುವುದರೊಂದಿಗೆ ಮಗುವಿಗೂ ಹಿತ ಉಂಟುಮಾಡಬಲ್ಲ ವರ್ತನೆ ಎಂದರೂ ತಪ್ಪಿಲ್ಲ; ಇತರರ ಮಾತು ಸರಿಯಾಗಿ ಅರ್ಥವಾಗದಿದ್ದಾಗ ಅಥವಾ ಕೇಳಿಸದಿದ್ದಾಗ ಮರುಪ್ರಶ್ನೆ ಸಾಧ್ಯವಿದೆ; ಮಗು ಭಾಷೆಯನ್ನು ಸಮರ್ಪಕವಾಗಿ ಕಲಿಯುವ ತನಕ ಮಾತ್ರ ಈ ಕಾರಣಗಳಿರಬಹುದೆಂದು ಅಂದಾಜಿಸಬಹುದು. ಆದರೆ ಮಾತಿನ ದೋಷವಿರುವ ಮಕ್ಕಳಲ್ಲಿ ಪದಗಳು, ವಾಕ್ಯಗಳು ಮತ್ತು ಸಂಪರ್ಕದ ಕ್ರಮಗಳೆಲ್ಲದರಲ್ಲಿಯೂ ಎದ್ದು ಕಾಣಿಸುವಂತಹ ಹಿನ್ನಡೆ ಇರುತ್ತದೆ. ಹೊಸ ಪದಗಳು, ವಾಕ್ಯಗಳು ಮತ್ತು ಆಡಿದ ಮಾತಿಗೆ ಸೂಕ್ತ ರೀತಿಯ ಪ್ರತಿಕ್ರಿಯೆ ಹಾವಭಾವಗಳ ಮೂಲಕವಾಗಲೀ, ಮಾತಿನ ರೀತಿಯಲ್ಲಾಗಲೀ ಇಲ್ಲವೆನ್ನುವುದು ಮಗುವಿನ ಸಂಪರ್ಕದಲ್ಲಿರುವವರಿಗೆ ಬಹಳ ಸುಲಭವಾಗಿ ಗೋಚರಿಸುತ್ತದೆ. ಸರಿಯಾದ ಮಾಹಿತಿಗಾಗಿ ವಾಕ್– ಶ್ರವಣ ತಜ್ಞರನ್ನು ಭೇಟಿ ಮಾಡಿ.

» ನನಗೀಗ 28ವರ್ಷ. ಎರಡು ವರ್ಷದ ಗಂಡು ಮಗುವಿದೆ. ನಾನು ಕಂಪ್ಯೂಟರ ಕಂಪನಿಯೊಂದರಲ್ಲಿ 6ವರ್ಷಗಳಿಂದ ಎಂಜಿನಿಯರ್ ಕೆಲಸ ಮಾಡುತ್ತಿದ್ದೇನೆ. ನನ್ನ ಗಂಡನೂ ಕಂಪ್ಯೂಟರ್ ತಜ್ಞ. ಬೇರೆ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಾವಿಬ್ಬರು ಬೆಳಗಿನ ಸಮಯದಲ್ಲಿ ಕೆಲಸಕ್ಕೆ ಹೋಗುವುದರಿಂದ ನನ್ನ ಮಗುವಿನ ಪಾಲನೆ, ಪೋಷಣೆಯನ್ನು (ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ) ಶಿಶು ಪಾಲನ ಕೇಂದ್ರ ಒಂದಕ್ಕೆ ವಹಿಸಿಕೊಟ್ಟಿರುತ್ತೇನೆ. ಬೆಳೆಯುವ ಮಗುವಿಗೆ ಅಗತ್ಯವಿರುವ ಎಲ್ಲ ಸೌಕರ್ಯ ಇರುವಂತಹ ಸ್ಥಳ ಇದಾಗಿದ್ದು ಸಣ್ಣ ವಯಸ್ಸಿನ ಹಸುಳೆಗಳೂ ಇಲ್ಲಿರುತ್ತಾರೆ. ಈಚೆಗೆ, ಕಳೆದ ಎರಡು– ಮೂರು ವಾರಗಳಿಂದ, ನನ್ನ ಕಂದನ ನಿದ್ದೆಯ ಸಮಯ ಬದಲಾಗಿದೆ. ಈಗವನು ತಡ ರಾತ್ರಿಯಲ್ಲಿ ಸಂಪೂರ್ಣ ಎಚ್ಚರವಾಗಿದ್ದುಗೊಂಡು ಆಟವಾಡುವ ಹುಮ್ಮಸಿನಲ್ಲಿ ಇರುತ್ತಾನೆ. ನಾವು ಇಡೀ ದಿನ ಹೊರಗಡೆ ದುಡಿದು ದಣಿದಿದ್ದರೂ ಮನೆಗೆ ಬಂದೊಡನೆ ಅವನೊಂದಿಗೆ ಕೊಂಚ ಸಮಯ ಕಳೆಯುತ್ತವೆ. ಆದರೆ ಮಧ್ಯರಾತ್ರಿಯ ನಂತರ ಅವನೊಂದಿಗೆ ಎಚ್ಚೆತ್ತುಕೊಂಡು ಆಟವಾಡುವಷ್ಟು ಶಕ್ತಿ ಎಷ್ಟೇ ಪ್ರಯತ್ನಿಸಿದರೂ ಬರುತ್ತಿಲ್ಲ. ಹೀಗಾಗಿ ಇದೊಂದು ಸಮಸ್ಯೆ ಆಗಿದೆ. ರಾತ್ರಿ ಸುಖವಾಗಿ ನಿದ್ದೆಮಾಡುವ ಅಭ್ಯಾಸ ಬದಲಾಗಿರುವುದು ನಮ್ಮ ಕೆಲಸ, ಓಡಾಟದ ಕ್ರಮಗಳ ಮೇಲೆ ಪರಿಣಾಮ ಬೀರುತ್ತಿದೆ. ಹೀಗಿದ್ದರೂ ನಮ್ಮ ಮಾನಸಿಕ ಆರೋಗ್ಯ ಉತ್ತಮವಾಗಿರುವುದಕ್ಕೆ ಬೇಕಾದಂತಹ ಹಲವು ಮಾರ್ಗಗಳಿವೆ ಎನ್ನುವುದರ ಬಗ್ಗೆ ಸಲಹೆಗಳು ಬಂದಿವೆ. ಕೆಲಸದ ಸಮಯದಲ್ಲಿ ಬದಲಾವಣೆ, ದೀರ್ಘಾವಧಿ ರಜೆ, ಹೊಸ ವೃತ್ತಿ ಆಯ್ಕೆ ಮಾಡಿಕೊಳ್ಳುವ ಬಗ್ಗೆಯೂ ಯೋಚಿಸಿದ್ದೇವೆ. ನಮ್ಮ ವೃತ್ತಿ ಬದುಕಿನ ಕ್ರಮ ಬದಲಾಯಿಸಿಕೊಳ್ಳುವುದಕ್ಕೂ ಮುಂಚಿತವಾಗಿ ನಮ್ಮ ಮಗುವಿನ ವರ್ತನೆ ಬಗ್ಗೆ ನಿಮ್ಮ ಸಲಹೆ ಬೇಕಿದೆ. ದಯಮಾಡಿ ತಿಳಿಸಿ.

-ರಕ್ಷಿತಾ ದೇವಗಿರಿ, ಬೆಂಗಳೂರು

ನಿಮ್ಮ ಮಗುವಿನ ನಿದ್ದೆಯ ರೀತಿಯನ್ನು ಬದಲಾಯಿಸುವುದಕ್ಕಿಂತ ನಿಮ್ಮ ದಿನಚರಿಯನ್ನು ಬದಲಾಯಿಸಿಕೊಳ್ಳುವುದು ಸುಲಭ ಹಾಗೂ ಸೂಕ್ತ. ಎಳೆಯ ಮಕ್ಕಳ ನಿದ್ದೆಯ ರೀತಿಯ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಈ ಸಂಗತಿ ಪ್ರತಿಯೊಬ್ಬ ತಾಯಿಗೂ ತಿಳಿದಿರುವಂತಹದ್ದೇ. ಹಸಿವು, ಶಾಖ, ಮಲ, ಮೂತ್ರಗಳ ವಿಸರ್ಜನೆಯ ಕ್ರಮಗಳನ್ನು ವಯಸ್ಕರ ಸೌಕರ್ಯಕ್ಕೆ ಅನುಗುಣವಾಗಿ ನಿಯಂತ್ರಿಸುವುದು ಕಷ್ಟ. ಕೆಲ ಕ್ರಿಯೆಗಳು ಗಟ್ಟಿಯಾಗಿರುವಂತಹ ಅಭ್ಯಾಸವೆಂದು ಕಂಡುಬಂದರೂ ತಕ್ಷಣದಲ್ಲಿ ಮಾರ್ಪಾಡಾಗುವುದುಂಟು. ಮಗುವಿನೊಂದಿಗೆ ಹೆಚ್ಚಿನ ಸಮಯ ಕಳೆಯುವ ಮನಸ್ಸು ಮಾಡಿದ್ದ ಪಕ್ಷದಲ್ಲಿ ನಿಮ್ಮ ವೃತ್ತಿಗೊಂದು ಬಿಡುವು ಕೊಡಬಹುದು. ನಿಮ್ಮ ಮಗು ಪ್ರಾಥಮಿಕ ಶಾಲೆ ಪ್ರವೇಶಿಸುತ್ತಿದ್ದಂತೆ ನಿಮ್ಮ ಆಸಕ್ತಿ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಪ್ರಯತ್ನಮಾಡಬಹುದು. ಹಾಗೆಂದಾಕ್ಷಣ ನಿಮ್ಮ ಸಾಧನೆ, ಸಾಮರ್ಥ್ಯಗಳೆಲ್ಲವೂ ವ್ಯರ್ಥ ಎನ್ನುವ ಭಾವನೆ, ಅಸಹಾಯಕತೆ ಬೇಡ. ನಿಮ್ಮ ವೃತ್ತಿ/ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳ ಕಡೆಯೂ ಗಮನವಿರಲಿ. ಮಗುವಿನ ಏಳಿಗೆಯೊಂದಿಗೆ ನಿಮ್ಮ ಏಳಿಗೆಯೂ ಸಾಧ್ಯವಾಗಬಲ್ಲದು. ನಿಮ್ಮ ವ್ಯಕ್ತಿತ್ವ, ಸ್ವಭಾವಗಳತ್ತ ಹೆಚ್ಚು ಗಮನಹರಿಸುವ ಮೂಲಕ ಕುಟುಂಬದ ಸಾಮರಸ್ಯ ಸಾಧ್ಯ. ಮುಗ್ಧತೆಯ ದಿನಗಳಲ್ಲಿ ಮಕ್ಕಳಿಗೆ ಪೋಷಕರು ನೀಡುವಂತಹ ಮನೋಬಲ ಬೇರಾವುದರ ಮೂಲಕವೂ ಬರದು. ಬೆಳೆಯುವ ಕಂದಮ್ಮನ ನಲಿವು, ನೋವುಗಳನ್ನು ಅರ್ಥ ಮಾಡಿಕೊಳ್ಳುವುದು ಪೋಷಕರ ಸ್ವಭಾವವೇ ಆಗಿದ್ದರೂ ಅದನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವುದಕ್ಕೆ ಸಮಯ ಮತ್ತು ಸಾಮಿಪ್ಯದ ಅಗತ್ಯವಿರುತ್ತದೆ.

ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001,
ಮೊಬೈಲ್ 9880937122 email: psychologist.sridhara@a1-mind.com